# ಬಿ.ಟಿ. ಲಲಿತಾನಾಯಕ್ ಅವರ ಕಾದಂಬರಿಗಳಲ್ಲಿ ಸ್ತ್ರೀ ಶಿಕ್ಷಣ

**ರಾಜಾ ಎ.**

ಕನ್ನಡ ಸಹಾಯಕ ಪ್ರಾಧ್ಯಾಪಕರು, ಭಾಷಾ ವಿಭಾಗ, ಟಿ. ಜಾನ್ ಕಾಲೇಜು (ಸ್ವಾಯತ್ತ ), ಬೆಂಗಳೂರು.

**DOI: https://doi.org/10.5281/zenodo.17487174**

## ABSTRACT:

ಬಿ.ಟಿ. ಲಲಿತಾನಾಯಕ್ ಅವರ ಕಾದಂಬರಿಗಳಲ್ಲಿ ಸ್ತ್ರೀ ಶಿಕ್ಷಣ ಮತ್ತು ಮಹಿಳೆಯರ ಸಾಮಾಜಿಕ ಸ್ಥಿತಿಗತಿಯನ್ನು ಈ ಲೇಖನವು ವಿಶ್ಲೇಷಿಸುತ್ತದೆ. 'ನೆಲೆ-ಬೆಲೆ' ಕಾದಂಬರಿಯಲ್ಲಿ, ಜಯಾ ಮತ್ತು ರೇಖಾ ಅವರ ಪಾತ್ರಗಳು ಸ್ತ್ರೀ ಪ್ರಗತಿಗೆ ಸಮಾಜ ಹೇರುವ ಅಡೆತಡೆಗಳು, ಶೋಷಣೆ ಮತ್ತು ಚಾರಿತ್ರಹರಣದಂತಹ ಸಮಸ್ಯೆಗಳನ್ನು ಎತ್ತಿ ತೋರಿಸುತ್ತವೆ. ವಿದ್ಯೆ ಮತ್ತು ಓದಿನಿಂದ ಜಯಾ ಜಾಗೃತ ಪ್ರಜ್ಞೆ ಗಳಿಸಿದರೂ, ಅನಾಗರಿಕ ಸಮಾಜದಲ್ಲಿ ಸೋಲುತ್ತಾಳೆ. 'ಗತಿ' ಕಾದಂಬರಿಯಲ್ಲಿ ಲಂಬಾಣಿ ಸಮುದಾಯದ ಸೋನಿ ಪಾತ್ರವು ಶಿಕ್ಷಣದ ಪರಿವರ್ತನಾತ್ಮಕ ಶಕ್ತಿಯನ್ನು ಪ್ರದರ್ಶಿಸುತ್ತದೆ. ಅಕ್ಷರ ಕಲಿತ ನಂತರ ಸೋನಿ, ಗಂಡನ ಕ್ರೌರ್ಯ ಮತ್ತು ಮೂಢನಂಬಿಕೆಯ ಪಂಚಾಯಿತಿಯ ವಿರುದ್ಧ ಸಿಡಿದೇಳುತ್ತಾಳೆ. ಶಿಕ್ಷಣದಿಂದ ಸ್ತ್ರೀ ಸಬಲೀಕರಣ ಮತ್ತು ಸಾಮಾಜಿಕ ಬದಲಾವಣೆ ಸಾಧ್ಯ ಎಂಬುದನ್ನು ಲಲಿತಾನಾಯಕ್ ಅವರು ವಾಸ್ತವ ನೆಲಗಟ್ಟಿನಲ್ಲಿ ಚಿತ್ರಿಸಿದ್ದಾರೆ.

## KEYWORDS:

ಸ್ತ್ರೀ ಶಿಕ್ಷಣ, ಸ್ತ್ರೀ ಸಬಲೀಕರಣ, ಸಾಮಾಜಿಕ ಸ್ಥಿತಿಗತಿ, ಬಿ.ಟಿ. ಲಲಿತಾನಾಯಕ್, ಕಾದಂಬರಿಗಳು.

ಬಿ.ಟಿ. ಲಲಿತಾನಾಯಕ್ ಅವರು ಸಮಾಜದಲ್ಲಿನ ಹಿಂದುಳಿದ ಮಹಿಳೆಯರ ಸ್ಥಿತಿಗತಿಯನ್ನು ಕುರಿತು ತಮ್ಮದೇ ನಿಲುವುಗಳನ್ನು ನೇರವಾಗಿ ಪ್ರತಿಪಾದಿಸಿದ್ದಾರೆ. ಹೆಣ್ಣಿನ ಜೀವನ ಅವಳ ಸ್ವಂತ ಅಭಿಪ್ರಾಯದಂತೆ ನಡೆಯಲು ಬಿಡದೆ ಸಮಾಜ ಹತ್ತಿಕ್ಕುವ ರೀತಿ, ಅದಕ್ಕೆ ಅವರು ಉಪಯೋಗಿಸುವ ಚಾರಿತ್ರಹರಣದಂತಹ ಪದ ಪ್ರಯೋಗ, ಸನ್ನಿವೇಶಗಳ ಸುಳಿಗೆ ಸಿಲುಕಿ ನಲುಗಿಹೋಗಿರುವ ಸ್ತ್ರೀಯರು ತಮ್ಮ ಅಸ್ತಿತ್ವ ಹುಡುಕಿ ಹೊರಡುವ ನೆಲೆಯಲ್ಲಿ ಉಂಟಾದ ವಾಸ್ತವ ನೆಲಗಟ್ಟೇನು ಎಂಬುದನ್ನು ಅವರ 'ನೆಲೆ-ಬೆಲೆ' ಮತ್ತು 'ಗತಿ' ಕಾದಂಬರಿಯಲ್ಲಿ ಕಾಣಬಹುದು.

'ನೆಲೆ-ಬೆಲೆ' ಕಾದಂಬರಿಯಲ್ಲಿ ಹೆಣ್ಣಿನ ಪ್ರಗತಿಪರ ಅಂಶಗಳಲ್ಲಿ ಆಕೆ ಗಟ್ಟಿಯಾಗಿ ನಿಲ್ಲಲು ಇರುವ ಅಡೆತಡೆಗಳೇನು ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಪ್ರಗತಿಪರ ಮನೋಭಾವದ ರೇಖಾ ಸಮಾಜದ ದೃಷ್ಟಿಯಲ್ಲಿ ಕೆಟ್ಟವಳಾಗಿ

ಬಿಂಬಿತಳಾಗುತ್ತಾಳೆ. ಕೌಟುಂಬಿಕವಾಗಿ ಶೋಷಣೆಗೊಳಗಾದ ಜಯ ಬಂಜೆ ಎಂಬ ಒಂದೇ ಕಾರಣಕ್ಕೆ ತಿರಸ್ಕಾರಕ್ಕೊಳಗಾಗುತ್ತಾಳೆ. ತನ್ನದೇ ನೆಲೆಯಲ್ಲಿ ಸ್ತ್ರೀ ಮುಂದುವರೆದಾಗ ಸಮಾಜದ ನಿಯಮಗಳು ವ್ಯತಿರಿಕ್ತವಾದ ಪರಿಣಾಮ ಉಂಟು ಮಾಡುವುದು ಅರಿವಿಗೆ ಬರುತ್ತದೆ. ಶೈಕ್ಷಣಿಕವಾಗಿ ಮುನ್ನಡೆಯುವ ಆಶಯವುಳ್ಳ ಜಯಾ ತಾನು ಪ್ರೇಮಿಸಿದ ವಿದ್ಯಾವಂತ, ಉದ್ಯೋಗಿ ಕಾಂತಯ್ಯನೊಡನೆ ವಿವಾಹವಾಗುವ ಕನಸನ್ನು ಸ್ವತಃ ತಂದೆಯಿಂದಲೇ ಮುರಿಯಲ್ಪಡಬೇಕಾಗುತ್ತದೆ. ತಂದೆಯ ಆಶಯದಂತೆ ಸ್ವಂತ ಬುದ್ಧಿಯಿಲ್ಲದ ಶಿವಮಲ್ಲುವಿನೊಡನೆ ವಿವಾಹವಾಗಿ ಮನೆಯಲ್ಲಿನ ಚಾಕರಿ ಮಾಡಿಕೊಂಡು ಬಂಜೆ ಎಂಬ ತಿರಸ್ಕಾರಕ್ಕೆ ಒಳಗಾಗುತ್ತಾಳೆ. ಇತ್ತ ಕಾಂತಯ್ಯನು ಬೇರೆ ಹುಡುಗಿಯನ್ನು ವಿವಾಹವಾಗುತ್ತಾನೆ. ಆಕೆಗೆ ಮಗುವಾದಾಗ ಬಾಣಂತನ ಮಾಡಲು ಜಯಾಳೇ ಕಾಂತಯ್ಯನ ಮನೆಗೆ ಹೋಗುತ್ತಾಳೆ. ಈ ಸಂದರ್ಭವನ್ನು ಬಳಸಿಕೊಂಡು ಜಯಾ ಪುಸ್ತಕಗಳ ಅವಲೋಕನ, ಮಹಿಳಾ ವಿಮೋಚನೆಯಂತಹ ವಿಚಾರಗಳ ಕಡೆಗೆ ಗಮನವಹಿಸಲು ಸಹಾಯವಾಗುತ್ತದೆ. ಇಲ್ಲಿ ರೇಖಾ ಎಂಬ ಪ್ರಗತಿಪರ ಚಿಂತಕಿಯ ಪರಿಚಯವಾಗಿ ಮಹಿಳೆಯರ ಶೋಷಣೆಯ ಬಗ್ಗೆ ಹೋರಾಡುವ ಅಂಶಗಳು ಗಮನ ಸೆಳೆಯುತ್ತವೆ.

ರೇಖಾ ಎಂ.ಎಸ್ಸಿ ಮಾಡುವಾಗ ಶಂಕರನೆಂಬ ಅನ್ಯಜಾತಿ ಹುಡುಗನನ್ನು ಪ್ರೇಮಿಸಿ, ತನಗೆ ಪ್ರಾಧ್ಯಾಪಕಿ ಹುದ್ದೆ ಸಿಕ್ಕಾಗ ಮದುವೆಯಾಗಬೇಕೆಂಬ ಸುಂದರವಾದ ಕನಸು ಕಂಡಿದ್ದ ಹೋರಾಟಗಾರ್ತಿ. ಆದರೆ ಮನೆಯವರ ಒತ್ತಾಯ ಮತ್ತು ವರದ ಎಂಬ ಕಾಮುಕನಿಂದ ಅತ್ಯಾಚಾರಕ್ಕೊಳಗಾಗಿ, ಆ ವಿಚಾರವನ್ನು ಶಂಕರ್‌ಗೆ ತಿಳಿಸಿದ್ದರಿಂದ ಆತ ಪಾವಿತ್ರತೆಯ ಬಗ್ಗೆ ಪತ್ರ ಬರೆದು ಪಲಾಯನ ಮಾಡಿದ. ಶೋಷಣೆಗೊಳಗಾದ ರೇಖಾ ವರದನನ್ನೇ ಮದುವೆಯಾಗುವ ಶೋಚನೀಯ ಸ್ಥಿತಿ ನಿರ್ಮಾಣವಾಯಿತು. ಸತ್ಯ ನ್ಯಾಯವನ್ನು ಮೀರದ ಈಕೆಗೆ ಸಿಕ್ಕಿದ ಬಹುಮಾನ ಈ ಜೀವನ. ಪ್ರಾಧ್ಯಾಪಕ ಹುದ್ದೆಯಲ್ಲಿದ್ದುಕೊಂಡು ಸಂಘಟನಾ ಕೆಲಸ ಮಾಡಲು ಸಾಧ್ಯವಿಲ್ಲವಿದ್ದರಿಂದ ರಾಜೀನಾಮೆ ನೀಡಿ ಮಹಿಳಾ ವಿಮೋಚನಾ ಸಂಘ ಮಾಡಿಕೊಂಡು ನೊಂದ ಮಹಿಳೆಯರ ಪರ ಹೋರಾಡುವ ಕೈಂಕರ್ಯವನ್ನು ರೇಖಾ ಕೈಗೊಂಡಳು. ಇವಳ ಸಜ್ಜನಿಕೆಯ ಸಹವಾಸದಿಂದ ಜಯಾಳಿಗೆ ಜೀವನದಲ್ಲಿ ಹೊಸ ಹುರುಪು ಬಂದಿತು.

ಜಯಾ ರೇಖಾಳ ಜೊತೆ ಸಂಘದ ಸಭೆ–ಸಮಾರಂಭಗಳಲ್ಲಿ ಭಾಗವಹಿಸಿದಾಗ ವಿಚಾರಗಳ ವಿನಿಮಯವಾಗಲಾಗಿ ಹೊಸ ಜಗತ್ತಿಗೆ ಪ್ರವೇಶ ಮಾಡುವ ಕನಸು ಕಾಣುತ್ತಿದ್ದಳು. ಆದರೆ ನೆರೆಮನೆ ಶಾಂತಮ್ಮ, ಕಾಂತಯ್ಯನ ಮಡದಿ ಕನಕ ಎಲ್ಲರೂ ಹೀಗಳೆಯುತ್ತಲೇ ಇದ್ದರು. ಹೊತ್ತು ಗೊತ್ತು ಇಲ್ಲದೆ, ಎಲ್ಲರೂ ಒಟ್ಟಿಗೆ ಸೇರಿ ಅದೇನೋ ಮಾಡುತ್ತಿರುತ್ತಾರೆ ಎಂಬ ಅಪವಾದವನ್ನು ಹೊರಿಸುವ ಇವರು ಸಂಸಾರದ

ಆಚೆಗೆ ಚಿಂತಿಸಿದವರಲ್ಲ, ಅವಿದ್ಯಾವಂತರಾಗಿರುವ ಇವರು ವಿದ್ಯೆಯ ಮಹತ್ವ ಅರಿಯದೆ ಟೀಕೆ ಟಿಪ್ಪಣಿಗಳನ್ನು ಮಾಡುತ್ತಲೇ ಕಾಲಕಳೆಯುವ ಲೋಕಜ್ಞಾನವಿಲ್ಲದವರು. ಹೆಂಗಸರು ಗಂಡಸಾಗುವುದಕ್ಕೆ ಸಾಧ್ಯವಿಲ್ಲವೆಂಬ ಕನಕನ ಚುಚ್ಚು ಮಾತು ಜಯಾಳಿಗೆ ಇಷ್ಟವಾಗುವುದಿಲ್ಲ ''ಹೆಂಗ್ಸು ಗಂಡಸಾಗಬೇಕು ಅಂತ ಹೊರಟಿರಲ್ಲ ಕನಕಾ. ತಾನೂ ಎಲ್ಲರ ಹಾಗೆ ಮನುಷ್ಯಳು ಅನ್ನುವುದನ್ನು ಸಾಬೀತುಗೊಳಿಸುವುದಕ್ಕೆ ಪ್ರಯತ್ನಿಸುತ್ತಾ ಇದ್ದಾಳೆ! ಸಮಾಜದಲ್ಲಿ ಗಂಡಸಿಗೆ ಇರುವ ಸೌಲತ್ತು–ಸ್ಥಾನಮಾನಗಳನ್ನು ಅವಳು ಯಾಕೆ ಪಡ್ಕೋಬಾರ್ದು? ಮಹಿಳಾ ಸಮಸ್ಯೆಗಳ ಬಗ್ಗೆ ಓದಿ ಕೇಳಿ ಸಾಕಷ್ಟು ಮನನ ಮಾಡಿಕೊಂಡಿದ್ದ ಜಯ ಸವಾಲು ಹಾಕಿದಳು''(ಬಿ.ಟಿ.ಲಲಿತಾನಾಯಕ್ : ನೆಲೆ–ಬೆಲೆ, ಪು.ಸಂ. 41) ಈ ರೀತಿಯ ಜಾಗೃತ ಪ್ರಜ್ಞೆ ಜಯಾಳಲ್ಲಿ ಮೂಡಲು ವಿದ್ಯೆ ಮತ್ತು ಸತತವಾದ ಓದಿನ ಅರಿವು ಸಹಾಯಕವಾಗಿತ್ತು. ಆದರೆ ಟೀಕೆ ಟಿಪ್ಪಣಿಗಳು ಅವಳು ಮರಳಿ ಗ್ರಾಮಕ್ಕೆ ಬಂದರೂ ತಪ್ಪದೆ ಇನ್ನೂ ಹೆಚ್ಚಾಗಿದ್ದು ವಿಪರ್ಯಾಸ.

ಆಧುನಿಕ ರೀತಿಯ ಜೀವನ ಶೈಲಿ, ದಿನಪತ್ರಿಕೆ ಓದುವುದು, ಗ್ರಾಮದ ಸ್ತ್ರೀಯರ ಸಮಸ್ಯೆಗಳಿಗೆ ಸ್ಪಂದಿಸುವ ಗುಣ ಮುಂತಾದ ಚಟುವಟಿಕೆಗಳಿಂದಾಗಿ ಮನೆಯಲ್ಲಿ ಎಲ್ಲರಿಗೂ ವಿರೋಧಿಯಾದಳು. ಈಕೆ ಬಂಜೆಯೆಂಬ ಕಾರಣಕ್ಕೆ ಎರಡನೇ ಮದುವೆಯಾದ ಶಿವಮಲ್ಲು ಹೊಸ ಹೆಂಡತಿ ಪರರೊಡನೆ ಪಲಾಯನ ಮಾಡಿದಾಗ, ತನಗೆ ತಿಳಿಯದ ಅತ್ಯಾಚಾರಕ್ಕೊಳಗಾದ ಜಯಾಳ ಸಾಂತ್ವನದಿಂದಲೇ ಸುಧಾರಿಸಿಕೊಳ್ಳಬೇಕಾಗುತ್ತದೆ. ಜಯಾ ಗರ್ಭಿಣಿಯೆಂಬ ವಿಚಾರ ಅವಳ ಮೇಲೆ ಪ್ರೀತಿ ಉಂಟಾಗಲು ಕಾರಣವಾಗುತ್ತದೆ. ಈ ರೀತಿಯ ಅನಾಚರ, ಅತ್ಯಾಚಾರವನ್ನು ಸಹಿಸಿಕೊಂಡು ಬಾಳುವೆ ನಡೆಸಬೇಕಾದ ಹೀನಾಯ ಸ್ಥಿತಿ ನಿರ್ಮಾಣವಾಗಿರುವುದು ಅರಿವಿನ ಕೊರತೆಯಿರುವ ಜನರಿಂದಲೆ ''ಅನಾದಿ ಕಾಲದಿಂದಲೂ ಹೆಣ್ಣಿಗೆ ವಿದ್ಯಾಭ್ಯಾಸ ಹಾಗೂ ಸ್ವಾತಂತ್ರ್ಯ ಆಲೋಚನಾಶಕ್ತಿಯನ್ನು ನಿರಾಕರಿಸಿದ್ದ ಪುರುಷ ಸಮಾಜದಲ್ಲಿ ಹೆಣ್ಣೊಬ್ಬಳ ಒಂಟಿ ಹೋರಾಟವನ್ನು ಈ ಕಾದಂಬರಿ ಚಿತ್ರಿಸುತ್ತದೆ.''(ಪೂರ್ವೋಕ್ತ 13, ಪು.ಸಂ.270) ಎಂಬ ಎಚ್.ಎಲ್. ಪುಷ್ಪರವರ ಮಾತುಗಳು ಜಯಾಳ ಅಸಹಾಯಕ ಪರಿಸ್ಥಿತಿಯನ್ನು ಅನಾವರಣ ಮಾಡುತ್ತದೆ. ಪ್ರಗತಿಪರ ಚಿಂತನೆಯುಳ್ಳ ಜಯಾ ಬಹಳ ಸೂಕ್ಷ್ಮವಾಗಿ ಎಚ್ಚೆತ್ತ ಮಹಿಳೆಯಾಗಿ ಕಾಣುತ್ತಾಳೆ. ಆದರೆ ಈಕೆಯ ಸಮಾಜಮುಖಿ ಆಲೋಚನೆ ಸಮಾಜಬಾಹೀರವಾಗಿ ಕಾಣುವಂತಹ ಅನಾಗರಿಕರ ನಡುವೆ ಸೋಲುತ್ತದೆ.

'ನೆಲೆ–ಬೆಲೆ' ಕಾದಂಬರಿಯಲ್ಲಿ ಹೆಣ್ಣಿನ ಪರಿವರ್ತನೆಯ ಹಾದಿಯಲ್ಲಿ ಶಿಕ್ಷಣ ಪರಿಣಾಮಕಾರಿಯಾದುದು ಎಂಬ ಅರಿವುಂಟಾದರೆ 'ಗತಿ' ಕಾದಂಬರಿಯಲ್ಲಿ ಅದು ಕಾರ್ಯರೂಪಕ್ಕೆ ಬರುವ ಮೂಲಕ ಹೊಸ ಬದಲಾವಣೆಯನ್ನು ಸಾದರಪಡಿಸುತ್ತದೆ. ಒಂದು ಹೆಣ್ಣು ಯಾವ ವರ್ಗದಲ್ಲಿ ಜನಿಸಿದ್ದರೂ ಕೂಡ ಎರಡನೆ ದರ್ಜೆಯವಳಾಗಿ

ಅವಳನ್ನು ಕಾಣುವುದನ್ನು ಗಮನಿಸಿದ್ದೇವೆ. ಈ ಕಾದಂಬರಿಯಲ್ಲಿ ಲಂಬಾಣಿ ಜನಾಂಗದಲ್ಲಿ ಜನಿಸಿ, ಅಲ್ಲಿನ ಸಮಾಜದ ಕ್ರೌರ್ಯ, ಮೂಢನಂಬಿಕೆ, ಶೋಷಣೆಗೊಳಗಾದ ಸೋನಿ ಅಕ್ಷರ ಕಲಿಕೆಯ ಬೆಳಕಿನಡಿಯಲ್ಲಿ ಸದೃಢ ಮನೋಭಾವ ಬೆಳೆಸಿಕೊಂಡು ದಿಟ್ಟ ಮಹಿಳೆಯಾಗಿ ಪರಿವರ್ತಿತಳಾದ ಪಾತ್ರವಾಗಿ ವಿಶಿಷ್ಟತೆಯನ್ನು ಸಾರುತ್ತಾಳೆ. ಇವಳ ಪತಿ ಮಾನ್‌ಸಿಂಗ್ ಶಿಕ್ಷಣ ಪಡೆದವನಾದರೂ ಆತನಿಗೆ ಅದರ ಅರಿವಿರುವುದಿಲ್ಲ, ದುಷ್ಟನಾಗಿ, ವ್ಯಭಿಚಾರಿಯಾಗಿ, ಕಳ್ಳತನವನ್ನೇ ಕಸುಬಾಗಿಸಿಕೊಂಡು ಸೋನಿ ಮತ್ತು ತನ್ನ ಇಬ್ಬರು ಹೆಣ್ಣು ಮಕ್ಕಳಿಗೆ ಚಿತ್ರಹಿಂಸೆ ನೀಡುವ ನೀಚನಾಗಿರುತ್ತಾನೆ. ಈತನ ತಂದೆ ಹರಿಸಿಂಗ್ ಕೂಡ ಇದೇ ದುರ್ಬುದ್ಧಿಯವನು ಪತ್ನಿಯನ್ನು ಕೊಂದು ಅವಳ ಮೇಲೆಯೇ ಅಪವಾದ ಹೊರಿಸಿ ಹೆಣ್ಣು ಹೆಂಡದ ದಾಸನಾಗಿ ಊರೂರು ಅಲೆಯುತ್ತಾ ಕಾಲಕಳೆಯುವ ದುಷ್ಟ.

ಸೋನಿ ತನ್ನ ದುಡಿಮೆಯಿಂದ ಮಕ್ಕಳನ್ನು ನೆಮ್ಮದಿಯಾಗಿ ನೋಡಿಕೊಳ್ಳಲು ಬಿಡದ ಈ ಪಾಪಿಗಳ ಪರವೇ ಸಮಾಜದ ರೀತಿನೀತಿಗಳು ಕೆಲಸ ಮಾಡುವಂತದ್ದು ಮತ್ತು ಸ್ತ್ರೀ ವಿರೋಧಿ ಮೌಲ್ಯವುಳ್ಳ ತಾಂಡ್ಯದ ದಿಬ್ಬದ ಜನರ ಪಂಚಾಯಿತಿಯ ಉದ್ದೇಶ. ಸೋನಿಯ ಪರವಾಗಿ ಅವಳ ಪ್ರಾಣವನ್ನು ಉಳಿಸಿದ ಲಚ್ಚಿಗೆ ಪಂಚಾಯಿತಿಯು ದಂಡ ವಿಧಿಸಿ ಕಂಬಕ್ಕೆ ಕಟ್ಟಿಹಾಕಿ ಥಳಿಸುವಂತದ್ದು ಕ್ರೌರ್ಯದ ಪರಮಾವಧಿ. ಆದರೆ ಮಹಿಳೆ ಈ ಅನ್ಯಾಯದ ನೆರಳಿನಲ್ಲಿಯೇ ಜೀವನ ನಡೆಸಬೇಕಾದ ಸಂಗತಿ ಶೋಚನೀಯವಾದುದು.

ಇಂತಹ ವಿಷಮಸ್ಥಿತಿಯಲ್ಲಿ ತಾಯಿಯ ಕೊಲೆಯನ್ನು ಕಣ್ಣಾರೆ ಕಂಡು ಹೆದರಿ ಓಡಿಹೋಗಿದ್ದ ಹರಿಸಿಂಗನ ಮತ್ತೊಬ್ಬ ಮಗ ಚಂದು ವಿದ್ಯಾವಂತನಾಗಿ ಈ ತಾಂಡ್ಯ ಪ್ರವೇಶಿಸಿ ಶಿಕ್ಷಣದ ಅರಿವು ಮೂಡಿಸುವ ಸಕಲ ಪ್ರಯತ್ನವನ್ನೆಲ್ಲಾ ಮಾಡುತ್ತಾನೆ. ಹೆಣ್ಣು ಮಕ್ಕಳು ಶಾಲೆ ಕಲಿಯುವ ವಿಷಯವೇ ಸೋನಿಗೆ ಹೊಸದಾಗಿ ಕಾಣಿಸಿ ಆಶ್ಚರ್ಯವನ್ನು ಸಹ ವ್ಯಕ್ತಪಡಿಸುವಂತಹ ಶಿಕ್ಷಣ, ಅರಿವು ಮೂಡಿಸುವ ತನ್ನ ಉದ್ದೇಶವನ್ನು ಸ್ಪಷ್ಟಪಡಿಸುತ್ತಾನೆ. "ಯಾರಿಗಾರ ಕಲ್ಸಪ್ಪ ಮಾರಾಯ ನಾನಂತೂ ಕೂಲಿಗ ಹೋಗಾಕೆ. ನನ್ನಂಥೋಳಿಗೆ ಯಾಕೆ ಬೇಕು ಆ ದೌಲತ್ತು?"(ಬಿ.ಟಿ ಲಲಿತಾನಾಯಾಕ್ : ನೆಲೆ-ಬೆಲೆ, ಪು.ಸಂ.41) ಎಂದು ಸೋನಿ ನಿರಾಕರಿಸಿದಾಗ, ಆರ್ಥಿಕವಾಗಿ, ಮಾನಸಿಕವಾಗಿ ಸಬಲಳಾದ ಲಚ್ಚಿ ಆಕೆಗೆ ಬುದ್ಧಿವಾದ ಹೇಳಿ ತಾನೂ ಶಾಲೆಗೆ ಬರುವುದಾಗಿ ಬೆಂಬಲ ಸೂಚಿಸುತ್ತಾ, ಹೊಸ ಮನ್ವಂತರಕ್ಕೆ ನಾಂದಿಯಾಗುತ್ತಾಳೆ.

ಸರ್ಕಾರ, ಸಂಘಸಂಸ್ಥೆಯ ಸಹಕಾರ ಪಡೆದು ಶಾಲೆ ಆರಂಭಿಸಿದ ಚಂದು ಶಾಲೆಯಲ್ಲಿ ಪ್ರಸ್ತುತ ಸಮಾಜದ ಘಟನಾವಳಿಗಳು, ರಾಜಕೀಯ, ಇತಿಹಾಸ ಮುಂತಾದ ಅನೇಕ ವಿಚಾರಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವಂತಹ ಚರ್ಚೆಗಳನ್ನು ಮಾಡುತ್ತಿರುತ್ತಾನೆ. ಇದರಿಂದಾಗಿ ಮನೋವಿಕಾಸ ಸಾಧ್ಯವಾಗುವಂತಹ

ಸನ್ನಿವೇಶ ಅಲ್ಲಿ ನಿರ್ಮಾಣವಾಗುತ್ತದೆ. ಶಾಲೆಯ ಕಟ್ಟಡ ಸಂಪೂರ್ಣವಾಗಿ ಕಟ್ಟಲ್ಪಟ್ಟಾಗ ಒಂದು ಕಾರ್ಯಕ್ರಮವನ್ನೇರ್ಪಡಿಸಿ ಎಲ್ಲರಿಗೂ ಆಹ್ವಾನ ನೀಡಲಾಗಿರುತ್ತದೆ. ಈ ಕಾರ್ಯಕ್ರಮದಲ್ಲಿ ಅಕ್ಷರ ಕಲಿಕೆಯ ಹಂತವಾಗಿ ತಮ್ಮ ತಮ್ಮ ಹೆಸರುಗಳನ್ನು ಕಪ್ಪು ಹಲಗೆಯ ಮೇಲೆ ಬರೆಯಲು ಸೂಚಿಸಿದಾಗ ಎಲ್ಲರೂ ಬರೆಯುತ್ತಾರೆ. ಸೋನಿ ಬರೆದಾಗ ಮಾನಸಿಂಗನಿಗೆ ಅಸಾಧ್ಯವಾದ ಕೋಪ ಬಂದು, ಅವಳ ಮತ್ತು ಚಂದುವಿನ ಸಂಬಂಧದ ಬಗ್ಗೆ ಇಲ್ಲ ಸಲ್ಲದುದನ್ನು ಹೇಳಿ, ಚಾರಿತ್ರಹರಣ ಮಾಡಿ, ಅವಳ ಮೇಲೆ ದೌರ್ಜನ್ಯವೆಸಗುತ್ತಾನೆ. ಮತ್ತೊಬ್ಬ ಸ್ತ್ರೀಯನ್ನು ಮದುವೆಯಾಗಿ ತನ್ನ ಮನೆಯಲ್ಲಿ ಇಟ್ಟುಕೊಂಡಿದ್ದರೂ ಸಹ ಸೋನಿಯು ನಾಯಿಯ ಹಾಗೆ ತನ್ನ ಮನೆಯ ಬಾಗಿಲು ಕಾಯುವ ಹಾಗೆ ಬಂದು ಬಿದ್ದಿರಲಿ ಎಂಬುದು ಅವನ ವಾದ. ಪಂಚಾಯಿತಿ ಸೇರಿಸಿದಾಗಲೂ ಮುಖಂಡರು ಆತನ ಪರವೇ ಮಾತನಾಡುವಂತದ್ದು ಕ್ರೌರ್ಯದ ಪರಮಾವಧಿ! ಹೆಣ್ಣಿಗೆ ಅಲ್ಲಿಯೂ ಕೂಡ ಅನ್ಯಾಯವೇ. ಆದರೆ ಸೋನಿ ಮೊದಲಿನ ಹಾಗೆ ಎಲ್ಲವನ್ನು ಸಹಿಸಿಕೊಳ್ಳುವ ಮನೋಭಾವದಿಂದ ಹೊರಬಂದು ಅಕ್ಷರ ಕಲಿತು ಸದೃಢತೆಯನ್ನು ಬೆಳೆಸಿಕೊಂಡಿದ್ದರಿಂದ ಗಂಡನ ವಿರುದ್ಧ ಸಿಡಿದೇಳುತ್ತಾಳೆ. ಮುತ್ತೈದೆತನದ ಕುರುಹಾಗಿದ್ದ ಎಲ್ಲವನ್ನು ಬಿಚ್ಚಿ ಮಾನಸಿಂಗ್‌ನ ಕಾಲಿನ ಮೇಲೆ ಎಸೆದು "ಇವತ್ತಿಂದ ನಾ ಅವನ ಹೆಂಡ್ತಿ ಅಲ್ಲ ಆತ ನನ್ನ ಗಂಡನಲ್ಲ!"(ಬಿ.ಟಿ ಲಲಿತಾನಾಯಾಕ್ : ನೆಲೆ-ಬೆಲೆ, ಪು.ಸಂ.41) ಎಂದು ಸಮಾಜದ ಕ್ರೂರ ವ್ಯವಸ್ಥೆಯ ವಿರುದ್ಧ ಧೈರ್ಯವಾಗಿ ನಿಲ್ಲುತ್ತಾಳೆ. ಆದರೆ ಪಂಚಾಯಿತಿ ಜನರು ಅನ್ಯಾಯದ ಪರವೇ ನಿಲ್ಲುತ್ತಾರೆ.

ದೇವರು ಮೈಮೇಲೆ ಬರುವ ನಾಟಕವಾಡುತ್ತಿದ್ದ ಪೂಜಾರಿ ಕಾಶಪ್ಪ ಸೋನಿಯನ್ನು ವ್ಯಭಿಚಾರಕ್ಕೆ ದೂಡುವ ಪ್ರಯತ್ನ ಮಾಡಿ ಸೋತಿರುತ್ತಾನೆ. ಇವನ ಮೈಮೇಲೆ ಬರುವ ದೇವರನ್ನು ನ್ಯಾಯ ತೀರ್ಮಾನ ಮಾಡುವಂತೆ ಕೇಳುವ ಜನರ ಮೂಢನಂಬಿಕೆ ಅನೇಕ ಕಡೆ ನಡೆಯುವ ದೌರ್ಜನ್ಯದ ಮುಖವನ್ನೇ ಪರಿಚಯಿಸುತ್ತದೆ. ಆಕಸ್ಮಿಕವಾಗಿ ನಡೆಯುವ ಕಾಶಪ್ಪನ ಕೊಲೆಯಿಂದಾಗಿ ಪೊಲೀಸರ ಪ್ರವೇಶವಾಗಿ ಮಾನಸಿಂಗ್ ಮತ್ತು ಆತನ ಹೊಸ ಹೆಂಡತಿ ಸಂಗವ್ವ, ಇನ್ನೂ ಮುಂತಾದ ಹಲವರು ದರೋಡೆಕೋರ ಮತ್ತು ಕೊಲೆಗಡುಕರ ಗುಂಪಿನವರೆಂದು ತಿಳಿಯುತ್ತದೆ. ಪೊಲೀಸರು ಹುಡುಕಿಕೊಂಡು ಬಂದು ಎಲ್ಲಾ ಅಪರಾಧಿಗಳನ್ನು ಬಂಧಿಸುವ ಮೂಲಕ ಕಾದಂಬರಿ ಸುಖಾಂತ ಕಾಣುತ್ತದೆ. ಜೊತೆಗೆ ಶಾಲೆಯ ತರಗತಿ ಪುನರ್ ಆರಂಭವಾಗುವ ಮುನ್ಸೂಚನೆಯನ್ನು ತಿಳಿಸಿ, ಹೊಸ ಬೆಳಕನ್ನು ಮೂಡಿಸುತ್ತದೆ. ಒಂದು ಹೆಣ್ಣಿಗೆ ಶಿಕ್ಷಣ ನೀಡಿದಾಗ ಸಮಾಜದ ಕ್ರೂರಪದ್ಧತಿಗಳ ವಿರುದ್ಧ ಪರಿವರ್ತನೆ ತರಲು ಸಾಧ್ಯ ಎಂಬಂತಹ ವಿಚಾರ ಸೋನಿ ಪಾತ್ರದಿಂದ ಪ್ರತಿಧ್ವನಿತವಾಗುತ್ತದೆ. ಚಲನಶೀಲಗತಿಯನ್ನು ಕಾದಂಬರಿಯಲ್ಲಿ ಲಲಿತಾನಾಯಕ್ ಅವರು ಪ್ರಸ್ತುತಪಡಿಸಿದ್ದಾರೆ.

ಯಾವುದು ಕೂಡ ಕಲ್ಪನೆಯಲ್ಲ, ವಾಸ್ತವ, ಬಡತನ, ಮೂಢನಂಬಿಕೆ, ಅನಾಚಾರದಿಂದ ವರ್ತಿಸುವ ಜನರಿಗೆ ಮತ್ತು ಶೋಷಣೆಗೊಳಗಾದವರಿಗೆ ಶಿಕ್ಷಣ ಬದಲಾವಣೆಯ ಆಶಾಕಿರಣ "ಈ ಸಮುದಾಯಕ್ಕೆ ಶಿಕ್ಷಣ, ಪ್ರಗತಿ, ಸಾಂಘಿಕ ಪ್ರಯತ್ನ, ಮಾನವೀಯತೆ ಮೊದಲಾದ ಆದರ್ಶಗಳನ್ನೊದಗಿಸುವ ಮೂಲಕ ಚಂದು ಕ್ರಾಂತಿಯ ಹರಿಕಾರನಾಗುತ್ತಾನೆ. ಗತಿಯ ಕೊನೆ– ಪಾಪಿಗಳೆಲ್ಲರಿಗೂ ಶಿಕ್ಷೆಯಾಗುವುದು ಸಾಧ್ಯತೆಗಳ ಮಟ್ಟದಲ್ಲಿಯೇ ಸಾಂಕೇತಿಕತೆಯನ್ನು ಪಡೆದರೂ ಅಸಂಭವನೀಯವಾಗಿ ಕಾಣುವುದಿಲ್ಲ."(ಡಾ. ಸಿ.ಬಿ. ಹೊನ್ನುಸಿದ್ದಾರ್ಥ(ಸಂ) : ಆಧುನಿಕ ಕನ್ನಡ ಸಮಗ್ರ ಸಾಹಿತ್ಯ ಚರಿತ್ರೆ(ಸಂ.4), ಪು.ಸಂ. 276) ಎಂಬ ಡಾ.ಜಿ.ಎಸ್. ಅಮೂರರ ಮಾತು ಚಂದುವಿನ ಶ್ರಮದ ಸಾರ್ಥಕತೆಯನ್ನು ಎತ್ತಿ ಹಿಡಿಯುತ್ತದೆ. ಪುರುಷರ ದಬ್ಬಾಳಿಕೆಯಿಂದ ನಲುಗುತ್ತಿರುವ ಸ್ತ್ರೀಯರಿಗೆ ಪುರುಷರ ಕ್ರೌರ್ಯದ ಹೊರತಾಗಿ ಚಂದುವಿನಂತಹ ಆದರ್ಶ ವ್ಯಕ್ತಿತ್ವದ ಉತ್ತಮ ಕಾರ್ಯವು ಸಹಕಾರಿಯಾದುದು ಎಂಬುದು ವಿಶೇಷವಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಲಲಿತಾನಾಯಕ್ ಬಿ.ಟಿ., (1982), ನೆಲೆ–ಬೆಲೆ, ಭಾಗ್ಯಲಕ್ಷ್ಮೀ ಪ್ರಕಾಶನ, ಬೆಂಗಳೂರು.
2. ಲಲಿತಾನಾಯಕ್ ಬಿ.ಟಿ., (2014), ಗತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
3. ರವಿನಾಯ್ಕ ಎಂ., (2013), ಡಾ. ಬಿ.ಟಿ. ಲಲಿತಾನಾಯಕ್, ಉದಯಭಾನು ಉನ್ನತ ಅಧ್ಯಯನ ಕೇಂದ್ರ, ಬೆಂಗಳೂರು.
4. ಹೊನ್ನುಸಿದ್ದಾರ್ಥ ಸಿ.ಬಿ. (ಸಂ), (2013), ಆಧುನಿಕ ಕನ್ನಡ ಸಮಗ್ರ ಸಾಹಿತ್ಯ ಚರಿತ್ರೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
5. ಶ್ರೀಮತಿ ಎಚ್.ಎಸ್., (2006), ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.